## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ವಿಜಯಪುರ ತಾಲ್ಲೂಕಿನ ಭರಟಗಿ ಗ್ರಾಮ ಪಂಚಾಯತಿ ಅಧ್ಯಕ್ಷರಾದ ಶ್ರೀಮತಿ ಸವಿತಾ ಗಂಡ ರಾಜು ನಾಯಿಕ ಇವರ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 48(4) ಮತ್ತು 43(ಎ) ರನ್ವಯ ಕ್ರಮ ಜರುಗಿಸುವ ಬಗ್ಗೆ.

ಓದಲಾಗಿದೆ:

1) ಮುಖ್ಯ ಕಾರ್ಯನಿರ್ವಾಹಕಾಧಿಕಾರಿ, ಜಿಲ್ಲಾ ಪಂಚಾಯತಿ, ವಿಜಯಪುರ ಇವರ ಪತ್ರದ ಸಂಖ್ಯೆ: ಜಿಪಂಆ/ಗ್ರಾಪಂ/ಸಿಬ್ಬಂದಿ/ಸಿಆರ್-22/2018-19 ದಿನಾಂಕ:05-06-2018.
2) ಅಪರ ಪೊಲೀಸ್ ಮಹಾನಿರ್ದೇಶಕರು, ಭ್ರಷ್ಟಾಚಾರ ನಿಗ್ರಹ ದಳ, ಬೆಂಗಳೂರು ಇವರ ಪತ್ರದ ಸಂಖ್ಯೆ: ಎಸಿಬಿ/ಕೇಂ.ಕ/ವಿಜಯಪುರ/ಮೊ.ಸಂ/08/2018 ದಿನಾಂಕ:21-06-2018.
3) ಇದೇ ಸಮಸಂಖ್ಯೆಯ ಕಾರಣ ಕೇಳುವ ನೋಟಿಸ್ ದಿನಾಂಕ: 28.06.2018.
4) ಶ್ರೀಮತಿ ಸವಿತಾ ಗಂಡ ರಾಜು ನಾಯಿಕ, ಅಧ್ಯಕ್ಷರು, ಭರಟಗಿ ಗ್ರಾಮ ಪಂಚಾಯತಿ, ವಿಜಯಪುರ ತಾಲ್ಲೂಕು ಮತ್ತು ಜಿಲ್ಲೆ ರವರು ಕಾರಣ ಕೇಳಿ ನೋಟೀಸಿಗೆ ಸಲ್ಲಿಸಿರುವ ಲಿಖಿತ ಹೇಳಿಕೆ, ದಿನಾಂಕ: 09.07.2018.
5) ಸಮಸಂಖ್ಯೆಯ ವಿಚಾರಣೆಗೆ ಹಾಜರಾಗಲು ತಿಳುವಳಿಕೆ ಪತ್ರ, ದಿನಾಂಕ: 09.10.2018 ಮತ್ತು 31.01.2019.

<u>ಪ್ರಸ್ತಾವನೆ:</u>

ಮೇಲೆ ಓದಲಾದ (1) ರಲ್ಲಿ ಮುಖ್ಯ ಕಾರ್ಯನಿರ್ವಾಹಕಾಧಿಕಾರಿ, ವಿಜಯಪುರ ಜಿಲ್ಲಾ ಪಂಚಾಯತಿ ರವರು ವಿಜಯಪುರ ತಾಲ್ಲೂಕಿನ ಭರಟಗಿ ಗ್ರಾಮ ಪಂಚಾಯತಿ ಅಧ್ಯಕ್ಷರಾದ ಶ್ರೀಮತಿ ಸವಿತಾ ಗಂಡ ರಾಜು ನಾಯಿಕ ಇವರು ತಮ್ಮ ಪತಿ ,ಶ್ರೀ ರಾಜು ತಂದೆ ಪಾಂಡು ನಾಯಿಕ ಇವರ ಜೊತೆಗೆ ಸೇರಿ ಡಾ.ಅಂಬೇಡ್ಕರ್ ವಸತಿ ಯೋಜನೆಯಡಿಯ ಫಲಾನುಭವಿಗಳಾದ (1) ಶ್ರೀಮತಿ ಸುಶೀಲಾಬಾಯಿ ಬಾಬು ರಾಠೋಡ (2) ಶ್ರೀಮತಿ ಕಾಶಿಬಾಯಿ ವೇಣು ಚವ್ಹಾಣ ಸಾ.ಹಂಚನಾಳ ತಾಂಡಾ ನಂ.2 ಇವರಿಬ್ಬರಿಗೂ ಮನೆ ಮಂಜೂರು ಮಾಡಿಸಿಕೊಡುವ ಕುರಿತು ರೂ 10,000/-ಗಳ ಲಂಚ ಪಡೆಯುತ್ತಿದ್ದಾಗ ದಿನಾಂಕ: 21.05.2018 ರಂದು ಭ್ರಷ್ಟಾಚಾರ ನಿಗ್ರಹದಳ ಪೊಲೀಸ್ ಠಾಣೆಯವರು ಬೀಸಿದ ಬಲೆಗೆ ಸಿಲುಕಿ ಅರೆಸ್ಟ್ ಮಾಡಿ ಜೈಲಿಗೆ ಕಳಿಸಿರುತ್ತಾರೆ. ಸದರಿಯವರು 48 ಘಂಟೆಗಳಿಗಿಂತ ಹೆಚ್ಚಿನ ಅವಧಿ ಬಂಧನದಲ್ಲಿರುತ್ತಾರೆ.

ಕಾರ್ಯನಿರ್ವಾಹಕಾಧಿಕಾರಿಗಳ ವರದಿಯನ್ನು ಪರಿಶೀಲಿಸಿ ವಸತಿ ಯೋಜನೆಯಡಿಯ ಬಡ ಫಲಾನುಭವಿಗಳಿಬ್ಬರಿಂದ ರೂ 10,000/- ಲಂಚದ ಹಣ ಸ್ವೀಕರಿಸುತ್ತಿದ್ದಾಗ ಭ್ರಷ್ಟಾಚಾರ ನಿಗ್ರಹದಳ ಪೊಲೀಸ್ ಠಾಣೆ, ವಿಜಯಪುರ ಇವರ ಬಲೆಗೆ ಸಿಲುಕಿ ಅರೆಸ್ಟಾಗಿ ಜೈಲಿಗೆ ಹೋಗಿ ಪಂಚಾಯತ್ ರಾಜ್ ವ್ಯವಸ್ಥೆಗೆ ಅಪಕೀರ್ತಿ ತರುವಂತಹ ದುರ್ನಡತೆ ಎಸಗಿರುವ ಭರಟಗಿ ಗ್ರಾಮ ಪಂಚಾಯತಿಯ ಅಧ್ಯಕ್ಷೆ ಶ್ರೀಮತಿ ಸವಿತಾ ಗಂಡ ರಾಜು ನಾಯಿಕ ಇವರನ್ನು ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993 ರ ಪ್ರಕರಣ 43 ಎ ಪ್ರಕಾರ ಗ್ರಾಮ ಪಂಚಾಯತಿಯ ಸದಸ್ಯತ್ವದಿಂದ ಮತ್ತು ಅಧ್ಯಕ್ಷೆ ಹುದ್ದೆಯಿಂದ ವಜಾ ಮಾಡುವ ಕುರಿತು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಮೇಲೆ ಓದಲಾದ (2) ರಲ್ಲಿ ಫಿರ್ಯಾದುದಾರರಾದ ಶ್ರೀ ಬಾಬು ಬಿನ್ ಭೋಜು ರಾಠೋಡ, ಹಂಚನಾಳ ತಾಂಡಾ, ವಿಜಯಪುರ ತಾಲ್ಲೂಕು ಮತ್ತು ಜಿಲ್ಲೆ ರವರ ಪತ್ನಿ ಮತ್ತು ಸಂಬಂಧಿಕರ ಹೆಸರಿನಲ್ಲಿ ಡಾ.ಅಂಬೇಡ್ಕರ್ ನಿವಾಸ ಯೋಜನೆಯಡಿಯಲ್ಲಿ ಮನೆ ಮಂಜೂರು ಮಾಡಲು 1) ಶ್ರೀಮತಿ ಸವಿತಾ, ಅಧ್ಯಕ್ಷರು ಮತ್ತು ಇವರ ಪತಿ ಆರೋಪಿತ 2) ರಾಜು ರಾಠೋಡ @ ನಾಯಿಕ ಇವರ ಮುಖಾಂತರ ರೂ.60,000/-ಗಳ ಲಂಚದ ಹಣಕ್ಕೆ ಒತ್ತಾಯ ಮಾಡಿದ್ದು, ದಿನಾಂಕ: 21.05.2018 ರಂದು ಫಿರ್ಯಾದಿಯವರಿಂದ ಆರೋಪಿತ 2) ರಾಜು ರಾಠೋಡ @ ನಾಯಿಕ ರವರು ರೂ 10,000/- ಲಂಚ ಹಣವನ್ನು ಪಡೆದುಕೊಳ್ಳುವಾಗ ಎಸಿಬಿ ಪೊಲೀಸ್‌ರ ಟ್ರಾಪ್ ಕಾರ್ಯಾಚರಣೆಯಲ್ಲಿ ಸಿಕ್ಕಿ ಬಿದ್ದಿದ್ದು ಆರೋಪಿತ ಚುನಾಯಿತ ಪ್ರತಿನಿಧಿಯಾದ 1) ಶ್ರೀಮತಿ ಸವಿತಾ, ಅಧ್ಯಕ್ಷರು ಮತ್ತು 2) ರಾಜು ರಾಠೋಡ @ ನಾಯಿಕ ರವರುಗಳನ್ನು ದಸ್ತಗಿರಿ ಮಾಡಿ, ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿರುತ್ತಾರೆ.

ಆರೋಪಿತ ಚುನಾಯಿತ ಪ್ರತಿನಿಧಿಯಾದ ಶ್ರೀಮತಿ ಸವಿತಾ ಕೋಂ ರಾಜು ರಾಠೋಡ @ ನಾಯಿಕ, ಅಧ್ಯಕ್ಷರು, ಬರಟಗಿ ಗ್ರಾಮ ಪಂಚಾಯಿತಿ ರವರನ್ನು ಪ್ರಸ್ತುತ ಇರುವ ಹುದ್ದೆಯಲ್ಲಿಯೇ ಮುಂದುವರೆಸಿದ್ದೇ ಆದಲ್ಲಿ, ಸದರಿಯವರು ಈ ಪ್ರಕರಣದ ತನಿಖೆಗೆ ಅವಶ್ಯವಿರುವ ದಾಖಲಾತಿಗಳನ್ನು ನಾಶಪಡಿಸುವ ಅಥವಾ ತಿರುಚುವ ಸಾಧ್ಯತೆಗಳಿರುತ್ತವೆ ಹಾಗೂ ಇತರೆ ಸಾಕ್ಷಿದಾರರಿಗೆ ತನ್ನ ಹುದ್ದೆಯ ಪ್ರಭಾವವನ್ನು ಬಳಸಿಕೊಂಡು ಬೆದರಿಕೆ ಒಡ್ಡುವ ಸಾಧ್ಯತೆಗಳು ಇರುತ್ತವೆ ಎಂದು

ತನಿಖಾಧಿಕಾರಿಗಳು ಕೋರಿದ್ದು, ಸಮುಚಿತ ಮಾರ್ಗವಾಗಿ ಪೊಲೀಸ್ ಅಧೀಕ್ಷಕರು, ಉತ್ತರ ವಲಯ, ಬೆಳಗಾವಿ ರವರು ಶಿಫಾರಸ್ಸು ವರದಿ ನೀಡಿರುತ್ತಾರೆ.

ಆದುದರಿಂದ ಆರೋಪಿತ ಚುನಾಯಿತ ಪ್ರತಿನಿಧಿಯಾದ ಶ್ರೀಮತಿ ಸವಿತಾ ಕೋಂ ರಾಜು ರಾಠೋಡ @ ನಾಯಿಕ, ಅಧ್ಯಕ್ಷರು, ಬರಟಗಿ ಗ್ರಾಮ ಪಂಚಾಯಿತಿ, ವಿಜಯಪುರ ತಾಲ್ಲೂಕು ಮತ್ತು ಜಿಲ್ಲೆ ರವರನ್ನು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ರ ಕಲಂ 43(ಎ) ರಂತೆ ಅಧ್ಯಕ್ಷ ಸ್ಥಾನ ಮತ್ತು ಸದಸ್ಯತ್ವದಿಂದ ತೆಗೆದು ಹಾಕಲು ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕೆಂದು ಕೋರಿರುತ್ತಾರೆ.

ಮೇಲೆ ಓದಲಾದ (3) ರಲ್ಲಿ ಸದರಿಯವರ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯ್ದೆ 1993 ರ ಪ್ರಕರಣ 48(4) ಮತ್ತು 43(ಎ) ರಡಿ ಕ್ರಮ ವಹಿಸುವ ಪೂರ್ವದಲ್ಲಿ ನಿಯಮಾನುಸಾರ ಕಾರಣ ಕೇಳುವ ನೋಟೀಸನ್ನು ಜಾರಿ ಮಾಡಲಾಗಿರುತ್ತದೆ.

ಮೇಲೆ ಓದಲಾದ (4) ರಲ್ಲಿ, ಶ್ರೀಮತಿ ಸವಿತಾ ಗಂಡ ರಾಜು ನಾಯಿಕ, ಅಧ್ಯಕ್ಷರು, ಭರಟಗಿ ಗ್ರಾಮ ಪಂಚಾಯತಿ ರವರು ಸರ್ಕಾರದಿಂದ ಜಾರಿಗೊಳಿಸಲಾಗಿದ್ದ ಕಾರಣ ಕೇಳಿ ನೋಟೀಸಿಗೆ ಕೆಳಗಿನಂತೆ ಉತ್ತರವನ್ನು ಸಲ್ಲಿಸಿರುತ್ತಾರೆ.

1. ನಾನು ಯಾವುದೇ ಹಣ ಆಶೆ ಆಮಿಶಗಳನ್ನು ಮಾಡಿರುವುದಿಲ್ಲ, ಸದರಿ ಈ ತೆರನಾಗಿ ಮಾಡಬೇಕಾದ್ದು ಹಣವನ್ನು ಕೂಡಾ ನಾನು ಸ್ವೀಕರಿಸಿರುವುದಿಲ್ಲ.
2. ನನ್ನ ಪತಿ ರಾಜು ನಾಯಿಕ ಹಾಗೂ ಅವರ ವ್ಯವಹಾರ ನನಗೆ ಗುರುತಿಲ್ಲ. ಸುಮ್ಮನೆ ರಾಜಕೀಯ ದುರುದ್ದೇಶ ಹಾಗೂ ವೈಯಕ್ತಿಕ ದ್ವೇಷ ಸಾಧಿಸಬೇಕೆಂದು ಎಂಬುದನ್ನು ಮನಸಿನಲ್ಲಿ ಇಟ್ಟುಕೊಂಡು ಮಾಡಿದ್ದಾರೆ.
3. ಒಂದು ಗ್ರಾಮ ಪಂಚಾಯತಿ ಅಧ್ಯಕ್ಷ ಹುದ್ದೆಯಲ್ಲಿದ್ದು ನನ್ನಿಂದ ಇಂತ ದುಷ್ಕೃತ್ಯ ಅಪಕೀರ್ತಿ ಬರುವಂತಹ ಕಾರ್ಯಗಳು ನಡೆದಿರುವುದಿಲ್ಲ, ಮಾಡಿರುವುದಿಲ್ಲ.
4. ಶ್ರೀಮತಿ ಸುಸಲಾಬಾಯಿ ಬಾಬು ರಾಠೋಡ ಮತ್ತು ಶ್ರೀಮತಿ ಕಾಶಿಬಾಯಿ ವೇಣು ಚವ್ಹಾಣ ಇವರು ಹಂಚಿನಾಳ ಎಲ್.ಟಿ. 2 ತಾಂಡಾದ ರಹವಾಸಿಗಳು ಇದ್ದು, ಹಂಚಿನಾಳ ತಾಂಡಾ 1, 2 ತಾಂಡಾಗಳು ಪ್ರಸ್ತುತ ಮಹಾನಗರ ಪಾಲಿಕೆ ವ್ಯಾಪ್ತಿಗೆ ಒಳಪಟ್ಟಿರುತ್ತದೆ. ಆ ಗ್ರಾಮಗಳಿಂದ ಯಾವುದೇ ಪಂಚಾಯತಿ ಚುನಾಯಿತ ಸದಸ್ಯರಿರುವುದಿಲ್ಲ.
5. ಮುಂದಿನ ವ್ಯವಸ್ಥೆ ಆಗುವವರೆಗೆ ಸರ್ಕಾರದ ಆದೇಶದ ಪ್ರಕಾರ ಮೂಲಭೂತ ಸೌಕರ್ಯ ಒದಗಿಸುವಂತೆ ಮೇಲಾಧಿಕಾರಿಗಳು ಸೂಕ್ತ ಸಲಹೆ ನೀಡಿರುವುದರಿಂದ ಅವರ ಸಲಹೆ ಸೂಚನೆ ಮೇರೆಗೆ ಮೂಲಭೂತ ಸೌಕರ್ಯ ಕುಡಿಯುವ ನೀರು, ಬೀದಿ ದೀಪ, ಗ್ರಾಮೀಣ ನೈರ್ಮಲ್ಯ, ರಸ್ತೆ ದುರಸ್ಥಿಗಳಂತಹ ಕೆಲಸಗಳನ್ನು ಸಾರ್ವಜನಿಕರಿಗೆ ಆತಂಕವಾಗಬಾರದು ಎನ್ನುವ ದೃಷ್ಟಿಯಿಂದ ಮುಂದುವರೆಸುತ್ತಿದ್ದೇವೆ.
6. ಎ.ಸಿ.ಬಿ, ಎಫ್.ಐ.ಆರ್ ವರದಿಯಲ್ಲಿ ಬಸವ ವಸತಿ ಯೋಜನೆ ಅಂತ ಇದ್ದು ಆದರೆ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ವಿಜಯಪುರ ಇವರ ಪತ್ರದಲ್ಲಿ ಡಾ॥ಅಂಬೇಡ್ಕರ್ ವಸತಿ ಯೋಜನೆ ಅಂತ ಇದ್ದು, ಆದುದರಿಂದ ಒಟ್ಟಾರೆಯಾಗಿ ಈ ಪ್ರಕರಣ ಗೊಂದಲಮಯವಾಗಿದೆ.
7. ನನ್ನ ಮೇಲೆ ದುರುದ್ದೇಶ ಇಟ್ಟುಕೊಂಡು ಭ್ರಷ್ಟಾಚಾರ ನಿಗ್ರಹದಳದಿಂದ ಈ ತೆರನಾಗಿ ಮಾಡಿದ್ದಾರೆ. ಈಗಾಗಲೇ ಈ ಪ್ರಕರಣವು ನ್ಯಾಯಲಯದಲ್ಲಿ ಇರುವುದರಿಂದ ಪ್ರಕರಣವು ಇತ್ಯರ್ಥ ಭ್ರಷ್ಟಾಚಾರ ಸಾಬೀತಾಗುವವರೆಗೆ ನನ್ನ ಮೇಲೆ (ಅಧ್ಯಕ್ಷರು, ಸದಸ್ಯರು ಹುದ್ದೆಗೆ) ಯಾವುದೇ ಕ್ರಮ ಕೈಗೊಳ್ಳಬಾರದು ಮತ್ತು ರದ್ದುಪಡಿಸಬಾರದೆಂದು ವಿನಂತಿಸಿರುತ್ತಾರೆ.

ಮೇಲೆ ಓದಲಾದ (5) ರನ್ವಯ ಮೌಖಿಕ ವಿಚಾರಣೆ ಜರುಗಿಸಲಾಗಿ, ಸದರಿ ಅಧ್ಯಕ್ಷರು, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ತಾಲ್ಲೂಕು ಪಂಚಾಯತಿಯ ವ್ಯವಸ್ಥಾಪಕರು ಮತ್ತು ಜಿಲ್ಲಾ ಪಂಚಾಯತಿಯ ಸಹಾಯಕ ಕಾರ್ಯದರ್ಶಿಗಳು ವಿಚಾರಣೆಗೆ ಹಾಜರಾಗಿರುತ್ತಾರೆ. ಆಪಾದಿತ ಅಧ್ಯಕ್ಷರು ವಿಚಾರಣಾ ಸಂದರ್ಭದಲ್ಲಿ, ತಾವು ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿರುವುದಾಗಿ ಮತ್ತು ರಾಜಕೀಯ ದುರುದ್ದೇಶದಿಂದ ಈ ರೀತಿ ಎಸಿಬಿ ಟ್ರ್ಯಾಪ್ ಮಾಡಿಸಿರುವುದಾಗಿ ಹೇಳಿಕೆ ನೀಡಿರುತ್ತಾರೆ.

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 48(4) ರಲ್ಲಿ ಕೆಳಗಿನಂತೆ ಉಲ್ಲೇಖಿಸಲಾಗಿದೆ.

**48. ಅಧ್ಯಕ್ಷನ ಮತ್ತು ಉಪಾಧ್ಯಕ್ಷನ ರಾಜೀನಾಮೆ ಅಥವಾ ತೆಗೆದುಹಾಕುವಿಕೆ.-** (4) ಗ್ರಾಮ ಪಂಚಾಯಿತಿಯ ಪ್ರತಿಯೊಬ್ಬ ಅಧ್ಯಕ್ಷನನ್ನು ಮತ್ತು ಉಪಾಧ್ಯಕ್ಷನನ್ನು, ಅಧ್ಯಕ್ಷನಾಗಿ ಅಥವಾ ಉಪಾಧ್ಯಕ್ಷನಾಗಿ ಅವನ ಕರ್ತವ್ಯಗಳ ನಿರ್ವಹಣೆಯಲ್ಲಿ ನಿರಂತರ ಅಲಕ್ಷತೆ ತೋರುತ್ತಿರುವುದಕ್ಕಾಗಿ ಅಥವಾ ದುರ್ನಡತೆಯ ತಪ್ಪಿತಸ್ಥನಾಗಿರುವುದಕ್ಕಾಗಿ ಅಧ್ಯಕ್ಷ ಅಥವಾ ಉಪಾಧ್ಯಕ್ಷ ಹುದ್ದೆಯಿಂದ, ಅವನಿಗೆ ಅಹವಾಲು ಹೇಳಿಕೊಳ್ಳಲು ಒಂದು ಅವಕಾಶವನ್ನು ಕೊಟ್ಟ ತರುವಾಯ ಮತ್ತು ಅವಶ್ಯಕವಾದಲ್ಲಿ ತಾಲ್ಲೂಕು ಪಂಚಾಯಿತಿಯಿಂದ ವರದಿಯೊಂದನ್ನು ಪಡೆದುಕೊಂಡು ಅದನ್ನು ಪರಿಶೀಲಿಸಿದ ತರುವಾಯ ಸರ್ಕಾರವು ಆ ಹುದ್ದೆಯಿಂದ, ತೆಗೆದುಹಾಕಬಹುದಾಗಿರತಕ್ಕದ್ದು ಮತ್ತು ಹಾಗೆ ತೆಗೆದುಹಾಕಲಾದ ಅಧ್ಯಕ್ಷನು ಅಥವಾ ಉಪಾಧ್ಯಕ್ಷನು (2)ನೇ ಉಪ-ಪ್ರಕರಣದ ಅಡಿಯಲ್ಲಿ ಸದಸ್ಯನಾಗಿರುವುದು ನಿಂತುಹೋಗಿರದಿದ್ದಲ್ಲಿ ಅವನು ಅಂಥ ಗ್ರಾಮ ಪಂಚಾಯತಿಯ ಸದಸ್ಯ ಹುದ್ದೆಯ ಉಳಿದ ಅವಧಿಯಲ್ಲಿ ಅಧ್ಯಕ್ಷನಾಗಿ ಅಥವಾ ಉಪಾಧ್ಯಕ್ಷನಾಗಿ ಮರು ಚುನಾವಣೆಗೆ ಅರ್ಹನಾಗಿರತಕ್ಕದ್ದಲ್ಲ.

ಲಭ್ಯವಿರುವ ಎಲ್ಲಾ ಸಾಕ್ಷ್ಯಾಧಾರಗಳು, ದಾಖಲಾತಿಗಳು, ಲಭ್ಯವಿರುವ ಎಲ್ಲಾ ಸಾಕ್ಷ್ಯಾಧಾರಗಳು, ದಾಖಲಾತಿಗಳು, ಆಪಾದಿತರ ಲಿಖಿತ ಮತ್ತು ಮೌಖಿಕ ಹೇಳಿಕೆಗಳು, ಮುಖ್ಯ ಕಾರ್ಯನಿರ್ವಾಹಕಾಧಿಕಾರಿಗಳು ಹಾಗೂ ಅಪರ ಪೊಲೀಸ್ ಮಹಾನಿರ್ದೇಶಕರು, ಭ್ರಷ್ಟಾಚಾರ ನಿಗ್ರಹ ದಳ, ಬೆಂಗಳೂರು ರವರ ವರದಿಯನ್ನು ಪರಿಶೀಲಿಸಲಾಗಿ, ಸದರಿ ಗ್ರಾಮ ಪಂಚಾಯಿತಿ ಅಧ್ಯಕ್ಷರು ಲಂಚ ಪ್ರಕರಣದಲ್ಲಿ ದಸ್ತಗಿರಿಯಾಗಿ ಪಂಚಾಯತ್ ರಾಜ್ ವ್ಯವಸ್ಥೆಗೆ ಅಪಕೀರ್ತಿ ತರುವಂತಹ ದುರ್ನಡತೆ ಎಸಗಿರುವ ಹಿನ್ನೆಲೆಯಲ್ಲಿ, ಸದರಿಯವರು ಈಗಾಗಲೇ ತಮ್ಮ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿರುವುದಾಗಿ ತಿಳಿಸಿರುವುದರಿಂದ, ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 43(ಎ) ರನ್ವಯ ಶ್ರೀಮತಿ ಸವಿತಾ ಗಂಡ ರಾಜು ನಾಯಿಕ, ಅಧ್ಯಕ್ಷರು, ಭರಟಗಿ ಗ್ರಾಮ ಪಂಚಾಯತಿ, ವಿಜಯಪುರ ತಾಲ್ಲೂಕು ಮತ್ತು ಜಿಲ್ಲೆ ಇವರನ್ನು ಸದರಿ ಗ್ರಾಮ ಪಂಚಾಯತಿಯ ಸದಸ್ಯ ಸ್ಥಾನದಿಂದ ತೆಗೆದು ಹಾಕಲು ನಿರ್ಣಯಿಸಿದೆ. ಅದರಂತೆ ಈ ಆದೇಶ.

**<u>ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 569 ಗ್ರಾಪಂಅ 2018, ಬೆಂಗಳೂರು, ದಿನಾಂಕ: 16-03-2019</u>**

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ, ಶ್ರೀಮತಿ ಸವಿತಾ ಗಂಡ ರಾಜು ನಾಯಿಕ, ಅಧ್ಯಕ್ಷರು, ಭರಟಗಿ ಗ್ರಾಮ ಪಂಚಾಯತಿ, ವಿಜಯಪುರ ತಾಲ್ಲೂಕು ಮತ್ತು ಜಿಲ್ಲೆ ರವರು ತನ್ನ ಕರ್ತವ್ಯಗಳನ್ನು ನಿರ್ವಹಿಸುವಾಗ ದುರ್ನಡತೆಯ ಅಥವಾ ತಲೆತಗ್ಗಿಸುವಂಥ ನಡತೆಯ ತಪ್ಪಿತಸ್ಥರಾಗಿರುವ ಹಿನ್ನೆಲೆಯಲ್ಲಿ, ಸದರಿಯವರ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 43(ಎ) ರನ್ವಯ ಕ್ರಮ ಜರುಗಿಸಿ, ವಿಜಯಪುರ ಜಿಲ್ಲೆ, ವಿಜಯಪುರ ತಾಲ್ಲೂಕಿನ ಭರಟಗಿ ಗ್ರಾಮ ಪಂಚಾಯತಿಯ ಸದಸ್ಯತ್ವ ಸ್ಥಾನದಿಂದ ತಕ್ಷಣದಿಂದ ಜಾರಿಗೆ ಬರುವಂತೆ ತೆಗೆದು ಹಾಕಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

16/3/19
(ಮುಬಾರಕ್ ಅಹ್ಮದ್),
ಉಪನಿರ್ದೇಶಕರು ಮತ್ತು ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

<u>ಗೆ:</u>

1) ಮುಖ್ಯ ಕಾರ್ಯನಿರ್ವಾಹಕಾಧಿಕಾರಿ, ವಿಜಯಪುರ ಜಿಲ್ಲಾ ಪಂಚಾಯತಿ, ವಿಜಯಪುರ.
2) ಕಾರ್ಯನಿರ್ವಾಹಕಾಧಿಕಾರಿ, ವಿಜಯಪುರ ತಾಲ್ಲೂಕು ಪಂಚಾಯತಿ, ವಿಜಯಪುರ, ವಿಜಯಪುರ ಜಿಲ್ಲೆ.
3) ಶ್ರೀಮತಿ ಸವಿತಾ ಗಂಡ ರಾಜು ನಾಯಿಕ, ಅಧ್ಯಕ್ಷರು, ಭರಟಗಿ ಗ್ರಾಮ ಪಂಚಾಯತಿ, ವಿಜಯಪುರ ತಾಲ್ಲೂಕು ಮತ್ತು ಜಿಲ್ಲೆ.
4) ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಭರಟಗಿ ಗ್ರಾಮ ಪಂಚಾಯತಿ, ವಿಜಯಪುರ ತಾಲ್ಲೂಕು ಮತ್ತು ಜಿಲ್ಲೆ.
5) ಗಣಕ ಕೋಶ-ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.
6) ಕಛೇರಿ ಪ್ರತಿ/ಹೆಚ್ಚುವರಿ ಪ್ರತಿ.

ಪ್ರತಿಯನ್ನು ಮಾಹಿತಿಗಾಗಿ:

1) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
2) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು (ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರ ಆಪ್ತ ಕಾರ್ಯದರ್ಶಿ.